# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 509

ಸದಸ್ಯರು ಹೆಸರು : ಎಂ. ನಾಗರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 14.08.2025

ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಟಿನ್ ಫ್ಯಾಕ್ಟರಿ, ಹೆಬ್ಬಾಳ, ಇಬ್ಬಲೂರು, ಗೊರುಗುಂಟೆಪಾಳ್ಯ, ಸಾರಕ್ಕಿ ಸಿಗ್ನಲ್, ಡೈರಿ ಸರ್ಕಲ್ ಜಂಕ್ಷನ್ ಮತ್ತು ಇತರೆ ಹಲವಾರು ಸ್ಥಳಗಳಲ್ಲಿ ಅತಿಹೆಚ್ಚು ವಾಹನ ದಟ್ಟಣೆ ಕಂಡುಬರುತ್ತಿದ್ದು, ಗಂಟೆಗಟ್ಟಲೇ ವಾಹನ ದಟ್ಟಣೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ನಗರದ ಟಿನ್ ಫ್ಯಾಕ್ಟರಿ, ಹೆಬ್ಬಾಳ, ಇಬ್ಬಲೂರು, ಗೊರಗುಂಟೆಪಾಳ್ಯ, ಸಾರಕ್ಕಿ ಸಿಗ್ನಲ್, ಡೈರಿ ಸರ್ಕಲ್ ಜಂಕ್ಷನ್ ಮತ್ತು ಇತರೆ ಹಲವಾರು ಸ್ಥಳಗಳಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನಗಳ ಸಂಖ್ಯೆಯಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಠಿಯಿಂದ ದಟ್ಟಣೆಯನ್ನು ತಿಳಿಗೊಳಿಸಲು ಬೆಂಗಳೂರು ನಗರ ಸಂಚಾರ ವಿಭಾಗದಿಂದ ಸೂಕ್ತ ಕ್ರಮವನ್ನು ಕೈಗೊಂಡಿದ್ದು; ವಿವರ ಈ ಕೆಳಕಂಡಂತಿದೆ:-<br>❖ ಅತಿ ಹೆಚ್ಚು ಸಂಚಾರ ದಟ್ಟಣೆಯಿರುವ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿ.<br>❖ ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧ.<br>❖ ಬಲ ತಿರುವು ಮತ್ತು "ಯು"ತಿರುವುಗಳ ನಿಷೇಧ.<br>❖ ಸಂಚಾರ ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಿದ್ದು, ಸುಗಮ ಸಂಚಾರಕ್ಕೆ ಅಗತ್ಯವಾದ ಕ್ರಮಗಳನ್ನು ನಿರ್ವಹಣೆ ಮಾಡುವಲ್ಲಿ ಹಾಗೂ ನಿಗಾವಣೆ ಮಾಡುವಲ್ಲಿ ಯಶಸ್ವಿಯಾಗಿ ವಿವಿಧ ಸಂಚಾರ ದಟ್ಟಣೆ ನಿವಾರಣಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ.<br>❖ ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಗೃಹರಕ್ಷಕ ಸಿಬ್ಬಂದಿ ಮತ್ತು ಟ್ರಾಫಿಕ್ ವಾರ್ಡನ್‌ಗಳ ತೊಡಗಿಸಿಕೊಳ್ಳುವಿಕೆ.<br>❖ ಸಿಗ್ನಲ್ ಫ್ರೀ ಕಾರಿಡಾರ್ ವ್ಯವಸ್ಥೆ.<br>❖ ಸಂಚಾರ ನಿಯಮ ಉಲ್ಲಂಘನೆ ಎಸಗುವವರ ವಿರುದ್ಧ ವಿಶೇಷ ಕಾರ್ಯಚರಣೆ.<br>❖ ಪೆಲಿಕಾನ್ ಸಿಗ್ನಲ್‌ಲೈಟ್ ಅಳವಡಿಕೆ.<br>❖ ಸಂಚಾರ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ.<br>❖ ಅವೈಜ್ಞಾನಿಕ ರಸ್ತೆ ಉಬ್ಬುಗಳ ತೆರವು & ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ.<br>❖ ಸಂಪರ್ಕ ರಹಿತ ನಿಯಮ ಜಾರಿಗೆ ಹೆಚ್ಚು ಉತ್ತೇಜನ.<br>❖ ಅಡ್ಡಾದಿಡ್ಡಿ ವಾಹನಗಳ ನಿಲುಗಡೆಗೆ ನಿಯಂತ್ರಣ.<br>❖ ಅತಿವೇಗವಾಗಿ ಚಲಿಸುವ ವಾಹನಗಳಿಗೆ ನಿಯಂತ್ರಣ.<br>❖ ಅಪಾಯಕಾರಿ ರೀತಿಯಲ್ಲಿ ಚಲಿಸುವ ವಾಹನ ಚಾಲಕ/ಸವಾರರ ವಿರುದ್ಧ ಪರಿಣಾಮಕಾರಿ ಕ್ರಮ.<br>❖ ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳ ಗುರುತಿಸುವಿಕೆ.<br>❖ ಅತಿ ಹೆಚ್ಚು ದಟ್ಟಣೆ ಉಂಟಾಗುತ್ತಿರುವ ಜಂಕ್ಷನ್‌ಗಳು ಹಾಗೂ ರಸ್ತೆಗಳ ಗುರುತಿಸುವಿಕೆ.<br>❖ ನಗರದೊಳಗೆ ಪೀಕ್ ಹವರ್ಸ್ ವೇಳೆಯಲ್ಲಿ ಭಾರೀ ವಾಹನಗಳ ಸಂಚಾರ ನಿಷೇಧ. |

- ❖ ದಟ್ಟಣೆ ನಿವಾರಿಸಲು ಐ.ಟಿ.ಎಂ.ಎಸ್. ತಂತ್ರಜ್ಞಾನದ ಬಳಕೆ.
- ❖ ಎ.ಐ. ತಂತ್ರಜ್ಞಾನ ಆಧಾರಿತ ಸಿಗ್ನಲ್‌ಗಳ ಅನುಷ್ಠಾನ.
- ❖ ಡ್ರೋನ್ ಕ್ಯಾಮೆರಾಗಳ ಬಳಕೆ.
- ❖ 169 ಸಿಗ್ನಲ್‌ಗಳನ್ನು ಅಡಾಪ್ಟೀವ್ ಸಿಗ್ನಲ್‌ಗಳಾಗಿ ಪರಿವರ್ತನೆ ಇತ್ಯಾದಿ.

**ಸುಗಮ ಸಂಚಾರ ನಿರ್ವಹಣೆಗೆ ಕೈಗೊಂಡಿರುವ ಯೋಜನೆಗಳು :**

**ಇಂಟೆಲಿಜೆಂ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್:** ಬೆಂಗಳೂರು ನಗರ ಸಂಚಾರ ಪೊಲೀಸ್ ಘಟಕವು ತಂತ್ರಜ್ಞಾನದ ಬಳಕೆ ಹಾಗೂ ಸಂಯೋಜನೆಗಳನ್ನು ಸುಗಮ, ಸುರಕ್ಷಿತ ಸಂಚಾರ ನಿರ್ವಹಣೆಗಾಗಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಅಂತಹ ಹಲವು ತಂತ್ರಜ್ಞಾನಗಳಲ್ಲಿ ಇಂಟೆಲಿಜೆಟ್ ಟ್ರಾಫಿಕ್ ಮ್ಯಾನೇಜ್ ಮೆಂಟ್ ಸಿಸ್ಟ (ಐ.ಟಿ.ಎಂ.ಎಸ್) ಕೂಡ ಒಂದಾಗಿರುತ್ತದೆ. ಈ ವ್ಯವಸ್ಥೆಯನ್ನು ಡಿಸೆಂಬರ್-2022 ರಿಂದ ನಗರದ ಪ್ರಮುಖ 50 ಜಂಕ್ಷನ್‌ಗಳಲ್ಲಿ ಜಾರಿಗೆ ತರಲಾಗಿದ್ದು, ಒಟ್ಟು 250 ಎ.ಎನ್.ಪಿ.ಆರ್. (ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರಿಕಗ್ನಿಷನ್) ಹಾಗೂ 80 ಆರ್.ಎಲ್.ವಿ.ಡಿ (ರೆಡ್‌ಲೈಟ್ ವೈಲೇಷನ್ ಡಿಟೆಕ್ಷನ್) ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯು ಸಂಪರ್ಕರಹಿತ ಸ್ವಯಂಚಾಲಿತ ಸಂಚಾರ ಉಲ್ಲಂಘನೆ ಪತ್ತೆ ಮತ್ತು ನಿಯಮ ಜಾರಿಗಾಗಿ ಇರುವ ಉತ್ತಮ ವ್ಯವಸ್ಥೆಯಾಗಿರುತ್ತದೆ.

**ಎ.ಟಿ.ಸಿ.ಎಸ್ ಸಿಗ್ನಲ್ ಗಳು :**

ಅಡಾಪ್ಟೀವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಂ ವ್ಯವಸ್ಥೆಯು ಸಂಚಾರ ನಿರ್ವಹಣೆಯನ್ನು ಮಾಡುವ ನೂತನ ವ್ಯವಸ್ಥೆಯಾಗಿದ್ದು, ನಿಜವಾದ ಸಂಚಾರದ ಹರಿವು ಮತ್ತು ಪರಿಸ್ಥಿತಿಗಳ ಆಧಾರದ ಮೇಲೆ ನೈಜ ಸಮಯದಲ್ಲಿ ಟ್ರಾಫಿಕ್ ಸಿಗ್ನಲ್ ಸಮಯವನ್ನು ಸರಿಹೊಂದಿಸುತ್ತದೆ.
ಸಾಂಪ್ರದಾಯಿಕ ಟ್ರಾಫಿಕ್ ನಿಯಂತ್ರಣ ವ್ಯವಸ್ಥೆಗಳಿಗಿಂತ ಭಿನ್ನವಾಗಿ, ಹೊಂದಾಣಿಕೆಯ ವ್ಯವಸ್ಥೆಗಳು ಹಾಗೂ ಸಂಚಾರದ ಹರಿವನ್ನು ಮೇಲ್ವಿಚಾರಣೆ ಮಾಡಲು, ದಟ್ಟಣೆಯನ್ನು ಕಡಿಮೆ ಮಾಡಲು ಹಾಗೂ ಸುರಕ್ಷತೆಯನ್ನು ಸುಧಾರಿಸಲು ಸಿಗ್ನಲ್ ಸಮಯಗಳನ್ನು ಕ್ರಿಯಾತ್ಮಕವಾಗಿ ಮಾರ್ಪಡಿಸಲು ಸಹಕಾರಿಯಾಗಿರುತ್ತದೆ.

**ಪ್ರಯೋಜನಗಳು :**

- ➢ ಸಂಚಾರದ ಪರಿಸ್ಥಿತಿಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವುದಲ್ಲದೆ, ಸಂಚಾರ ಸಾಂದ್ರತೆ, ವಾಹನ ವೇಗ ಮತ್ತು ಸಿಗ್ನಲ್‌ಗಳಲ್ಲಿ ಕಾಯುವ ಸಮಯಗಳಂತಹ ಮಾಹಿತಿಯನ್ನು ಸಂಗ್ರಹಿಸುತ್ತಿದೆ.
- ➢ ಪ್ರಸ್ತುತ ಸಂಚಾರ ಪರಿಸ್ಥಿತಿಗಳ ಆಧಾರದ ಮೇಲೆ ಸಿಗ್ನಲ್ ಗಳನ್ನು(ಹಸಿರು, ಹಳದಿ ಮತ್ತು ಕೆಂಪು) ಸರಿಹೊಂದಿಸಲು ಈ ವ್ಯವಸ್ಥೆಯು ಸಹಕಾರಿಯಾಗಿದೆ.
- ➢ ಸಂಚಾರದ ಹರಿವು, ದಿನದ ಸಮಯ ಮತ್ತು ಸಂಚಾರದ ಹರಿವಿನ ಮೇಲೆ ಪರಿಣಾಮ ಬೀರುವ ವಿಶೇಷ ಘಟನೆಗಳು ಅಥವಾ ರಸ್ತೆ ಘಟನೆಗಳಂತಹ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತವೆ.
- ➢ ಅಡಾಪ್ಟೀವ್ ಸಿಸ್ಟಂಗಳ ಮುಖ್ಯ ಗುರಿ ದಟ್ಟಣೆಯನ್ನು ಕಡಿಮೆ ಮಾಡುವುದಾಗಿದ್ದು, ಪ್ರಯಾಣದ ಸಮಯವನ್ನು ಕಡಿಮೆ ಮಾಡುವುದು ಮತ್ತು ಸಂಚಾರದ ಹರಿವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಹಾಗೂ ಸಿಗ್ನಲ್ ಸಮಯವನ್ನು ಅತ್ಯುತ್ತಮವಾಗಿಸುವ ಮೂಲಕ, ಸಂಚಾರ ದಟ್ಟಣೆಯನ್ನು ನಿವಾರಿಸುವುದಾಗಿರುತ್ತದೆ.
- ➢ ಸಂಚಾರ ದಟ್ಟಣೆ ಕಡಿಮೆ ಮಾಡುವ ಮೂಲಕ ವಾಹನಗಳ ಇಂಧನ ಬಳಕೆ ಮತ್ತು ವಾಹನಗಳು ಹೊರಸೂಸುವ ಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುವ ಮೂಳಕ ಸ್ವಚ್ಛ ಪರಿಸರಕ್ಕೆ ಕೊಡುಗೆ

ನೀಡುತ್ತದೆ.

**ಅಸ್ತ್ರಂ** :ASTraM(Actionable Intelligence for Sustainable Traffic Management)ಎಂಬ ವಿನೂತನ ಉಪಕ್ರಮವು ನಗರದ ಸಂಚಾರದ ಹರಿವಿನ ಬಗ್ಗೆ ಒಳನೋಟಗಳನ್ನು ನೀಡುವ ಸ್ಮಾರ್ಟ್ ಟ್ರಾಫಿಕ್ ಇಂಜಿನ್ ಇದಾಗಿದೆ. ಇದು ಪರಿಣಾಮಕಾರಿಯಾದ ಸಂಚಾರ ನಿರ್ವಹಣೆಗೆ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ಸೂಕ್ತ ಕ್ರಮ ಜರುಗಿಸಿ ಸುಗಮ ಸಂಚಾರ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ. ಇದರಲ್ಲಿ ಮುಖ್ಯವಾಗಿ ಕಂಜಷನ್ ಅಲರ್ಟ್‌ಗಳು ಬಿಟಿಟಿ ಆಧಾರಿತ ಇನ್ಸಿಡೆಂಟ್ ರಿಪೋರ್ಟಿಂಗ್ ಹಾಗೂ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಡ್ಯಾಶ್‌ಬೋರ್ಡ್ ಅನಾಲಿಟಿಕ್ಸ್‌ಗಳನ್ನು ಒಳಗೊಂಡಿರುತ್ತದೆ.

- ➢ ಪ್ರಸ್ತುತ ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ಸುಗಮಗೊಳಿಸಲು ಸಲುವಾಗಿ 165 ಸಿಗ್ನಲ್‌ಗಳನ್ನು ಅಡಾಪ್ಟೀವ್ ಸಿಗ್ನಲ್-ಗಳನ್ನಾಗಿ ಉನ್ನತೀಕರಿಸಲಾಗಿರುತ್ತದೆ.
- ➢ ಡ್ರೋನ್ ಕ್ಯಾಮೆರಾ: ಬೆಂಗಳೂರು ನಗರ ಸಂಚಾರ ವಿಭಾಗವು ಹಾಲಿ 10 ಡ್ರೋನ್ ಕ್ಯಾಮೆರಾಗಳನ್ನು ಬಳಸುತ್ತಿದ್ದು ಬೆಳಗಿನ ಮತ್ತು ಸಂಜೆಯ ಪೀಕ್ ಅವರ್‌ಗಳ ಸಮಯದಲ್ಲಿ ಸಂಚಾರದ ಹರಿವನ್ನು ನಿಗಾವಣೆ ಮಾಡಲು ಬಳಸಲಾಗುತ್ತಿದೆ.
- ➢ ಬೆಂಗಳೂರು ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣೆ ವಾಹನಗಳಿಂದ ಸಂಚಾರ ಸಮಸ್ಯೆಗಳು ಕಂಡುಬಂದಿದ್ದ ಕಾರಣ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 04-00 ಗಂಟೆಯವರೆಗೆ ಹಾಗೂ ರಾತ್ರಿ 10-00 ಗಂಟೆಯಿಂದದ ಬೆಳಿಗ್ಗೆ 07-00 ಗಂಟೆಯವರೆಗೆ ಸಂಚರಿಸುವಂತೆ ಹಾಗೂ ಬೆಳ್ಳಿಗ್ಗೆ 07-00 ಗಂಟೆಯಿಂದ 11-00 ಗಂಟೆಯವರೆಗೆ ಹಾಗೂ ಸಂಜೆ 04-00 ಗಂಟೆಯಿಂದ ರಾತ್ರಿ 10-00 ಗಂಟೆಯವರೆಗೆ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.
- ➢ ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ ನಾಲ್ಕನೇ ಶನಿವಾರದಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ.
- ➢ ಸಂಚಾರ ನಿರ್ವಹಣಾ ಕೇಂದ್ರವು (ಟಿಎಂಸಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಟಿಎಂಸಿಯಲ್ಲಿ ಅಳವಡಿಸಲಾಗಿರುವ ವಿಡಿಯೋವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. ಎರಡು ಪಾಳಿಯಲ್ಲಿ ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್ ಲೈಟ್‌ನ ಸಮಯವನ್ನು ಟಿಎಂಸಿಯಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
- ➢ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಸಾರ್ವಜನಿಕರಿಗೆ ಸಂಚಾರ ದಟ್ಟಣೆ ಉಂಟಾಗಿರುವ ಮಾರ್ಗಗಳ ಬಗ್ಗೆ ಮಾಹಿತಿಯನ್ನು ಬಳಸಬಹುದಾದ ಪರ್ಯಾಯ ಮಾರ್ಗಗಳ ಕುರಿತು ಮಾಹಿತಿಯನ್ನು ವಿನಿಮಯ ಮಾಡಲಾಗುತ್ತಿದೆ.
- ➢ ನಗರದಲ್ಲಿ ಪ್ರಮುಖ ವೃತ್ತ / ಸ್ಥಳಗಳನ್ನು ಗುರುತಿಸಿ ಅಗತ್ಯವಿರುವ ಒಟ್ಟು 268 ಸಿಗ್ನಲ್ ಲೈಟ್, 169 ಅಡಾಪ್ಟೀವ್ ಸಿಗ್ನಲ್‌ಗಳು, 39

<table>
<tr><td></td><td></td><td>ಸ್ಥಳಗಳಲ್ಲಿ ಪೆಲಿಕಾನ್ ಸಿಗ್ನಲ್‌ಗಳನ್ನು ಹಾಗೂ 537 ಬ್ಲಿಂಕರ್‌ಗಳನ್ನು ಅಳವಡಿಸಲಾಗಿದೆ.<br>➢ ಬೆಂಗಳೂರು ನಗರದ ವ್ಯಾಪ್ತಿ ಪ್ರದೇಶವು ಹೆಚ್ಚಾದಂತೆ ಠಾಣಾ ವ್ಯಾಪ್ತಿಗಳ ಪ್ರದೇಶವು ಬೆಳೆಯುತ್ತಿದ್ದು, ಸಂಚಾರ ಪೊಲೀಸ್ ಠಾಣೆಗಳಿಗೆ ಸಂಚಾರ ದಟ್ಟಣೆಯನ್ನು ನಿವಾರಿಸಲು ಉಂಟಾಗುವ ಒತ್ತಡವನ್ನು ಪರಿಹರಿಸುವ ಸಲುವಾಗಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗದಲ್ಲಿ 2023-24 ನೇ ಸಾಲಿನಲ್ಲಿ ಚಿಕ್ಕಬಾಣಾವಾರ ಹಾಗೂ ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆಗಳನ್ನು ಹಾಗೂ 2024-25ನೇ ಸಾಲಿಗೆ ಸಂಜಯನಗರ, ಶೇಷಾದ್ರಿಪುರಂ ಹಾಗೂ ಜೆ.ಪಿ. ನಗರ ಸಂಚಾರ ಪೊಲೀಸ್ ಠಾಣೆಗಳನ್ನು ಒಟ್ಟು 05 ಸಂಚಾರ ಪೊಲೀಸ್ ಠಾಣೆಗಳನ್ನು ಸೃಜಿಸಿ, ಒಟ್ಟು 425 ಹೆಚ್ಚುವರಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ.<br>➢ ವಿವಿಧ ಪೌರ ಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಬೆಂಗಳೂರು ನಗರ ಸಂಚಾರ ವ್ಯವಸ್ಥೆ ಸುಧಾರಣೆಗಾಗಿ ಪ್ರತಿ ವಾರ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಬಗ್ಗೆ ಚರ್ಚಿಸಲಾಗುತ್ತಿದೆ.<br>➢ ವಿವಿಧ ಏಜೆನ್ಸಿಗಳು, ಪ್ರಧಾನ ಸಂಶೋಧನಾ ಸಂಸ್ಥೆಗಳು ಮತ್ತು ಎನ್.ಜಿ.ಓಗಳಾದ (IISc, IIT Madras, RASTA, BAF, CiSTUP)ಗಳೊಂದಿಗಿನ ಸಹಯೋಗಗಳು, ರಸ್ತೆ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸಲು ಮತ್ತು ಡೇಟಾ-ಚಾಲಿತ ಒಳನೋಟಗಳು ಮತ್ತು ನವೀನ ಪರಿಹಾರಗಳ ಮೂಲಕ ಸಂಚಾರ ಹರಿವನ್ನು ಉತ್ತಮಗೊಳಿಸುವ ಕ್ರಮ ವಹಿಸಲಾಗುತ್ತಿದೆ.</td></tr>
<tr><td>ಆ)</td><td>ಈ ವಾಹನ ದಟ್ಟಣೆ ತಡೆಗಟ್ಟಲು ಸರ್ಕಾರದ ವತಿಯಿಂದ ಕೃತಕ ಬುದ್ಧಿಮತ್ತೆ(AI) ತಂತ್ರಾಂಶವನ್ನು ಬಳಸಲಾಗುತ್ತಿದೆಯೇ;</td><td>ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಕೃತಕ ಬುದ್ಧಿಮತ್ತೆ ತಂತ್ರಾಂಶವನ್ನು ಬಳಸಲಾಗುತ್ತಿದೆ.</td></tr>
<tr><td>ಇ)</td><td>ನಗರದಲ್ಲಿ ಆತ್ಯಾಧುನಿಕ ತಂತ್ರಾಂಶವನ್ನು ಬಳಸಿಕೊಂಡು ವಾಹನ ದಟ್ಟಣೆಯನ್ನು ನಿಯಂತ್ರಿಸಲು ಯಾವ ಯಾವ ಖಾಸಗಿ ಸಂಸ್ಥೆಗಳ ನೆರವು ಪಡೆಯಲಾಗುತ್ತಿದೆ ಮತ್ತು ಒಪ್ಪಂದ ಮಾಡಿಕೊಳ್ಳಲಾಗಿದೆ; ಎಷ್ಟು ವರ್ಷದ ಒಪ್ಪಂದ ಮಾಡಿಕೊಳ್ಳಲಾಗಿದೆ ಮತ್ತು ವಾರ್ಷಿಕ ನಿರ್ವಹಣೆ ಮೊತ್ತವೆಷ್ಟು ?</td><td>ಬೆಂಗಳೂರು ನಗರ ಸಂಚಾರ ವಿಭಾಗದಿಂದ ಅತ್ಯಾಧುನಿಕ ತಂತ್ರಾಂಶವನ್ನು ಬಳಸಿಕೊಂಡು 169 ಸಿಗ್ನಲ್‌ಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಖಾಸಗಿ ಐ.ಬಿ.ಐ. ಗ್ರೂಪ್ ಆಫ್ ಇಂಡಿಯಾ ರವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದು; ವಿವರಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ:-
<table>
<tr><th>ಒಪ್ಪಂದ ಮಾಡಿಕೊಂಡಿರುವ ಖಾಸಗಿ ಸಂಸ್ಥೆಯ ವಿವರ</th><th>ವಿಷಯ</th><th>ಅವಧಿ.</th><th>ವಾರ್ಷಿಕ ನಿರ್ವಹಣ ಮೊತ್ತವೆಷ್ಟು</th></tr>
<tr><td>M/s. IBI GROUP INDIA PRIVATE LIMITED</td><td>ಬೆಂಗಳೂರು ನಗರ ಸಂಚಾರ ವಿಭಾಗ ವ್ಯಾಪ್ತಿಯಲ್ಲಿ ಚಾಲ್ತಿಯಲ್ಲಿರುವ 169 ಸಂಚಾರಿ ಸಿಗ್ನಲ್ ವ್ಯವಸ್ಥೆಗಳನ್ನು ಉನ್ನತೀಕರಿಸಲು ಮತ್ತು ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣಕ್ಕೆ ಸಿಂಕ್ರೋನೈಸೇಶನ್ ಮಾಡಲು ಹಾಗೂ ಸ್ಥಳಗಳಲ್ಲಿ ಹೊಸ ಅಡಾಪ್ಟಿವ್</td><td>05 ವರ್ಷಗಳ ಅವಧಿಗೆ</td><td>Comperhensive ವಾರ್ಷಿಕ ನಿರ್ವಹಣೆ ಮೊತ್ತ 3,40,00,000<br>(1 year)</td></tr>
</table></td></tr>
</table>

| | | | | | | |
|---|---|---|---|---|---|---|
| | | | ಸಂಚಾರ ವ್ಯವಸ್ಥೆ ನಿಯಂತ್ರಗಳನ್ನು ಅಳವಡಿಸಿ ಸಿಂಕ್ರೋನೈಸೇಶನ ಮಾಡಲು ಹಾಗೂ ಅಡಾಪ್ಟಿವ್ ಸಂಚಾರ ವ್ಯವಸ್ಥೆ ನಿಯಂತ್ರಣ ಘಟಕಗಳ ಬಗ್ಗೆ | | | |
| | | M/s. IBI GROUP INDIA PRIVATE LIMITED | ಬೆಂಗಳೂರು ಸಂಚಾರ ವಿಭಾಗಕ್ಕೆ ಅಗತ್ಯವಿರುವ Procuring Map visualization API's ಅನ್ನು ಖರೀದಿ ಸರಬರಾಜು ಮತ್ತು ಅಳವಡಿಕೆ ಮಾಡಿರುವ ಬಗ್ಗೆ | 01 ವರ್ಷಗಳ ಅವಧಿಗೆ | ವಾರ್ಷಿಕ ನಿರ್ವಹಣೆ ಮೊತ್ತ 78,30,000/- (1 year) | |
| | | M/s. IBI GROUP INDIA PRIVATE LIMITED | ಬೆಂಗಳೂರು ಸಂಚಾರ ವಿಭಾಗಕ್ಕೆ ಅಗತ್ಯವಿರುವ ಸಂಚಾರ ದಟ್ಟಣೆಯ ಮೇಲ್ವಿಚರಣೆಗಾಗಿ ಸ್ಮಾರ್ಟ್ ಟ್ರಾಫಿಕ್ ಇಂಜಿನ್ ಅನ್ನು ಖರೀದಿ ಸರಬರಾಜು ಮತ್ತು ಅಳವಡಿಕೆ ಮಾಡಿರುವ ಬಗ್ಗೆ | 01 ವರ್ಷಗಳ ಅವಧಿಗೆ | ವಾರ್ಷಿಕ ನಿರ್ವಹಣೆ ಮೊತ್ತ 93,66,756/- 1 year) | |

ನಗರ ಭೂ ಸಾರಿಗೆ ನಿರ್ದೇಶನಾಲಯ ಇಲಾಖೆ(DULT)ಯು ಜೈಕಾ ಕಂಪನಿಯ ಸಹಯೋಗದಲ್ಲಿ ಬೆಂಗಳೂರು ನಗರದಲ್ಲಿ 28 ಜಂಕ್ಷನ್‌ಗಳಲ್ಲಿ ಎ.ಐ. ಆಧಾರಿತ ಸಿಗ್ನಲ್‌ಗಳನ್ನು ಅಳವಡಿಸಲಾಗಿರುತ್ತದೆ.

---

ಹೆಚ್‌ಡಿ 384 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು